KACB010005682025

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 33/2025

ದಿನಾಂಕ 11 ನೇ ಜೂನ್ 2025

**ಪಿರ್ಯಾದುದಾರರು** – ರಾಜ್ಯದ ಪರವಾಗಿ ಪಾತಪಾಳ್ಯ ಪೊಲೀಸ್ ಠಾಣೆ

ವಿರುದ್ಧ

**ಆರೋಪಿ** –
1. ನರೇಂದ್ರ ಬಾಬು
2. ನಾರಾಯಣಪ್ಪ
3. ರಾಮಾಂಜಿ
4. ಮಂಜುಳ
5. ಲಕ್ಷ್ಮೀನರಸಿಂಹಪ್ಪ

## ದೋಷಾರೋಪಣೆ

ಶ್ರೀ ಎಸ್.ಶ್ರೀಧರ, ಬಿ.ಇ., ಎಲ್.ಎಲ್.ಬಿ., ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ. ನ್ಯಾಯಾಧೀಶರು, ಚಿಕ್ಕಬಳ್ಳಾಪುರ, ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಿಸುತ್ತಿದ್ದೇನೆ.

ದಿಃ 11.09.2024 ರಂದು ಮಧ್ಯಾಹ್ನ 2.40ರ ಸಮಯದಲ್ಲಿ 1 ರಿಂದ 5ನೇ ಆರೋಪಿತರಾದ ನೀವು ಬಾಗೇಪಲ್ಲಿ ತಾಲ್ಲೂಕು ಜಂಗಾಲಪಲ್ಲಿ ಗ್ರಾಮದ ಶ್ರೀ ಸಪ್ಪಲಮ್ಮ ದೇವಸ್ಥಾನದ ಬಳಿ ಜ್ಯೋತಿ ಕಾರ್ಯಕ್ರಮ ನಡೆಯುತ್ತಿದ್ದು, ಸ್ಥಳದಲ್ಲಿ ಚಾಸಾ–1 ರಿಂದ ಚಾಸಾ–4 ರವರು ಹಾಜರಿದ್ದು, 1ನೇ ಆರೋಪಿಯಾದ ನೀವು ಹಳೆಯ ವೈಶಮ್ಯವನ್ನು

ಚಾಸಾ–1 ರಿಂದ ಚಾಸಾ–4 ರವರೊಂದಿಗೆ ಹೊಂದಿದ್ದು, ಇದೇ ಕಾರಣಕ್ಕಾಗಿ 1 ರಿಂದ 5 ನೇ ಆರೋಪಿತರಾದ ನೀವು ಅಪರಾಧ ಮಾಡುವ ಉದ್ದೇಶದಿಂದ ಅಕ್ರಮ ಕೂಟದ ಸದಸ್ಯರಾಗಿ ಸೇರಿಕೊಂಡ ಕಾರಣ ಬಿ.ಎನ್.ಎಸ್ ಕಾಯ್ದೆ ಕಲಂ 189(2) ಇದರ ಜೊತೆ 190 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

**ಎರಡನೇಯದಾಗಿ** 1 ರಿಂದ 5 ನೇ ಆರೋಪಿತರಾದ ನೀವು ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಅಕ್ರಮ ಕೂಟದ ಸದಸ್ಯರಾಗಿ ಮುಂದುವರೆಯುತ್ತಾ 1 ನೇ ಆರೋಪಿ ನರೇಂದ್ರ ಬಾಬು ಆದ ನೀವು ಚಾಸಾ–1 ರಿಂದ ಚಾಸಾ–4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿ ಭಂಗೊಳಿಸುವಂತೆ ಪ್ರಚೋದಿಸಿದ ಕಾರಣ ಆರೋಪಿತರಾದ ನೀವು ಬಿ.ಎನ್.ಎಸ್ ಕಾಯ್ದೆ ಕಲಂ 352 ಇದರ ಜೊತೆ 190 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

**ಮೂರನೇಯದಾಗಿ** 1 ರಿಂದ 5 ನೇ ಆರೋಪಿತರಾದ ನೀವು ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಅಕ್ರಮ ಕೂಟದ ಸದಸ್ಯರಾಗಿ ಮುಂದುವರೆಯುತ್ತಾ 1 ನೇ ಆರೋಪಿಯಾದ ನೀವು ನಿಮ್ಮ ಕೈಗಳಿಂದ ಚಾಸಾ–2 ಪ್ರಕಾಶ್ ರವರ ಮೈಮೇಲೆ ಹೊಡೆದು ನೋವು ಉಂಟು ಮಾಡಿದ್ದು, ಚಾಸಾ–1 ಶ್ರೀಮತಿ ಲಕ್ಷ್ಮೀನರಸಮ್ಮ ಇವರು ಅಡ್ಡ ಬಂದಾಗ 1 ನೇ ಆರೋಪಿಯಾದ ನೀವು ಚಾಸಾ–1 ರವರ ಜುಟ್ಟನ್ನು ಹಿಡಿದು ಎಳೆದಾಡಿ ಕೈಗಳಿಂದ ಹೊಡೆದು ನೋವು ಉಂಟು ಮಾಡಿದ್ದು, 3 ನೇ ಆರೋಪಿ ರಾಮಾಂಜಿ ಆದ ನೀವು ನಿಮ್ಮ ಕೈಗಳಿಂದ ಚಾಸಾ–3 ಮಂಜುಳ ಇವರ ಮೈಮೇಲೆ ಹೊಡೆದು ನೋವು ಉಂಟು ಮಾಡಿದ್ದು, 5 ನೇ ಆರೋಪಿ ಲಕ್ಷ್ಮೀನರಸಿಂಹಪ್ಪ ಆದ ನೀವು ಜಗಳ ತೆಗೆದು ಚಾಸಾ–2 ಪ್ರಕಾಶ್ ರವರ ಮೈ ಕೈಗೆ ನಿಮ್ಮ ಕೈಗಳಿಂದ ಹೊಡೆದು ನೋವು ಉಂಟು ಮಾಡಿದ ಕಾರಣ ಬಿ.ಎನ್.ಎಸ್ ಕಾಯ್ದೆ ಕಲಂ 115(2) ಇದರ ಜೊತೆ 190 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

**ನಾಲ್ಕನೇಯದಾಗಿ** 1 ರಿಂದ 5 ನೇ ಆರೋಪಿತರಾದ ನೀವು ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಅಕ್ರಮ ಕೂಟದ ಸದಸ್ಯರಾಗಿ ಮುಂದುವರೆಯುತ್ತಾ 1 ನೇ ಆರೋಪಿಯಾದ ನೀವು ಚಾಸಾ–2 ರವರ ಬಲಗೈನ ಉಂಗುರದ ಬೆರಳನ್ನು ಮುರಿದು ತೀವ್ರ ಸ್ವರೂಪದ ಗಾಯ ಉಂಟು ಮಾಡಿದ ಕಾರಣ ಬಿ.ಎನ್.ಎಸ್ ಕಾಯ್ದೆ ಕಲಂ 117(2) ಇದರ ಜೊತೆ 190 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

**ಐದನೇಯದಾಗಿ** 1 ರಿಂದ 5 ನೇ ಆರೋಪಿತರಾದ ನೀವು ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಅಕ್ರಮ ಕೂಟದ ಸದಸ್ಯರಾಗಿ ಮುಂದುವರೆಯುತ್ತಾ 1 ನೇ ಆರೋಪಿಯಾದ ನೀವು ಚಾಸಾ–1 ರಿಂದ ಚಾಸಾ–4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಚಾಸಾ–2 ರವರ ಮೈಮೇಲೆ ಕೈಗಳಿಂದ ಹೊಡೆದು, ಅವರ ಬಲಗೈ ಉಂಗುರದ ಬೆರಳು ಮುರಿದಿದ್ದು, ಚಾಸಾ–1 ರವರು ಅಡ್ಡ ಬಂದಾಗ ಅವರ ಜುಟ್ಟನ್ನು ಹಿಡಿದು ಎಳೆದಾಡಿ ಕೈಗಳಿಂದ ಹೊಡೆದು ನೋವು ಉಂಟು ಮಾಡಿದ್ದು, 2 ನೇ ಆರೋಪಿ ನಾರಾಯಣಪ್ಪ ಆದ ನೀವು ಚಾಸಾ–1 ರವರು ಧರಿಸಿದ್ದ ಸೀರೆಯನ್ನು ಹಿಡಿದು ಎಳೆದಾಡಿದ್ದು, 1 ನೇ ಆರೋಪಿಯಾದ ನೀವು ಮಾನಬಂಗ ಮಾಡುವ ಉದ್ದೇಶದಿಂದ ಚಾಸಾ–1 ರವರ ರವಿಕೆಯನ್ನು ಹಿಡಿದು ಹರಿದುಹಾಕಿ ಸಾರ್ವಜನಿಕ ಸ್ಥಳದಲ್ಲಿ ಚಾಸಾ–1 ರವರಿಗೆ ಅವಮಾನ ಮಾಡಿದ ಕಾರಣ ಬಿ.ಎನ್.ಎಸ್ ಕಾಯ್ದೆ ಕಲಂ 76 ಇದರ ಜೊತೆ 190 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

**ಆರನೇಯದಾಗಿ** 1 ರಿಂದ 5 ನೇ ಆರೋಪಿತರಾದ ನೀವು ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಅಕ್ರಮ ಕೂಟದ ಸದಸ್ಯರಾಗಿ ಮುಂದುವರೆಯುತ್ತಾ 4 ನೇ ಆರೋಪಿ ಶ್ರೀಮತಿ ಮಂಜುಳಾ ಆದ ನೀವು ಚಪ್ಪಲಿಯನ್ನು ತೆಗೆದುಕೊಂಡು ಬಂದು ಚಾಸಾ–1 ರವರಿಗೆ ಸಾರ್ಜಜನಿಕರ ಮುಂದೆ ಹೊಡೆದು ಅವಮಾನ ಮಾಡಿದ ಕಾರಣ

ಬಿ.ಎನ್.ಎಸ್ ಕಾಯ್ದೆ ಕಲಂ 133 ಇದರ ಜೊತೆ 190 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

**ಏಳನೇಯದಾಗಿ** 1 ರಿಂದ 5 ನೇ ಆರೋಪಿತರಾದ ನೀವು ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಅಕ್ರಮ ಕೂಟದ ಸದಸ್ಯರಾಗಿ ಮುಂದುವರೆಯುತ್ತಾ 1 ರಿಂದ 5 ನೇ ಆರೋಪಿತರಾದ ನೀವು ಚಾಸಾ-1 ರಿಂದ ಚಾಸಾ-4 ರವರನ್ನು ಕುರಿತು ನೀವು ಪುನಃ ಗ್ರಾಮಕ್ಕೆ ಬಂದರೆ ನಿಮ್ಮನ್ನು ಪ್ರಾಣ ಸಹಿತ ಬಿಡುವುದಿಲ್ಲ ಎಂದು ಹೇಳಿ ಪ್ರಾಣ ಬೆದರಿಕೆ ಹಾಕಿದ ಕಾರಣ ಬಿ.ಎನ್.ಎಸ್ ಕಾಯ್ದೆ ಕಲಂ 351 ಇದರ ಜೊತೆ 190 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

**ಕಡೆಯದಾಗಿ** 1 ರಿಂದ 5 ನೇ ಆರೋಪಿತರಾದ ನೀವು ಅದೇ ದಿನ, ಅದೇ ಸಮಯ, ಅದೇ ಸ್ಥಳದಲ್ಲಿ ಅಕ್ರಮ ಕೂಟದ ಸದಸ್ಯರಾಗಿ ಮುಂದುವರೆಯುತ್ತಾ ಚಾಸಾ-1 ರಿಂದ ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಚಾಸಾ-2 ರವರಿಗೆ ಕೈಗಳಿಂದ ಹೊಡೆದು ನೋವುಂಟು ಮಾಡಿ ಬಲಗೈ ಉಂಗುರುದ ಬೆರಳು ಮುರಿದಿದ್ದು, ಚಾಸಾ-1 ರವರು ಅಡ್ಡ ಬಂದಾಗ ಅವರ ಜುಟ್ಟನ್ನು ಹಿಡಿದು ಎಳೆದಾಡಿ ಕೈಗಳಿಂದ ಹೊಡೆದು ನೋವುಂಟು ಮಾಡಿ ಚಾಸಾ-1 ರವರ ಸೀರೆಯನ್ನು ಹಿಡಿದು ಎಳೆದಾಡಿ ಅವರ ರವಿಕೆಯನ್ನು ಹರಿದುಹಾಕಿ ಚಾಸಾ-3 ಮಂಜುಳಾ ಇವರಿಗೆ ಕೈಗಳಿಂದ ಹೊಡೆದಿದ್ದು, ಚಾಸಾ-1 ರವರಿಗೆ ಜಪ್ಪಲಿಯಿಂದ ಹೊಡೆದು ಅವಮಾನಗೊಳಿಸಿದ್ದು, ಚಾಸಾ-2 ರವರಿಗೆ 5 ನೇ ಆರೋಪಿ ಕೈಗಳಿಂದ ಹೊಡೆದು ನೋವುಂಟು ಮಾಡಿ ದೊಂಬಿ ಗಲಾಟೆ ಮಾಡಿದ ಕಾರಣ ಬಿ.ಎನ್.ಎಸ್ ಕಾಯ್ದೆ ಕಲಂ 191(2) ಇದರ ಜೊತೆ 190 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಈ ಮೇಲ್ಕಂಡ ನಿಮ್ಮ ಮೇಲಿನ ಆರೋಪದ ಬಗ್ಗೆ ವಿಚಾರಣೆಯಾಗಲು ನಾನು ಆದೇಶಿಸುತ್ತೇನೆ.

**ಸಹಿ/-**

**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 33/2025

**ಪಿರ್ಯಾದುದಾರರು** – ರಾಜ್ಯದ ಪರವಾಗಿ ಪಾತಪಾಳ್ಯ ಪೊಲೀಸ್ ಠಾಣೆ

ವಿರುದ್ಧ

**ಆರೋಪಿ** –
1. ನರೇಂದ್ರ ಬಾಬು
2. ನಾರಾಯಣಪ್ಪ
3. ರಾಮಾಂಜಿ
4. ಮಂಜುಳ
5. ಲಕ್ಷ್ಮೀನರಸಿಂಹಪ್ಪ

**ಕಲಂ 263(2)ಬಿ.ಎನ್.ಎಸ್.ಎಸ್(ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ರಡಿ ಆಪಾದಿತನ ಹೇಳಿಕೆ**

**ಪ್ರಶ್ನೆ**1) ಈಗ ಓದಿ ಹೇಳಿದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿದ್ದೀಯಾ?

**ಉತ್ತರ:**

**ಪ್ರಶ್ನೆ** 2)ನಿನ್ನ ಮೇಲೆ ಮಾಡಲಾಗಿರುವ ದೋಷಾರೋಪಣೆಗೆ ನೀನು ಸಮ್ಮತಿಸುವಿಯೋ ಇಲ್ಲವೇ ವಿಚಾರಣೆಯಾಗಬೇಕೆಂದು ಇಚ್ಚಿಸುವಿಯೋ?

**ಉತ್ತರ:**

ಮೇಲೆ ಹೇಳಿದ ಪ್ರಶ್ನೆಗಳನ್ನು ಅಪಾದಿತನಿಗೆ ಅರ್ಥವಾಗುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಿ ಹೇಳಲಾಗಿ, ಆತ ನೀಡಿದ ಉತ್ತರವನ್ನು ಸರಿಯಾಗಿ ದಾಖಲಿಸಿಕೊಂಡಿರುವೆ ಅಂತ ದೃಢಪಡಿಸುತ್ತೇನೆ.

**ದಿನಾಂಕ:** 25.06.2025

**ಸಹಿ/–**

**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು  ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.